ಕರ್ನಾಟಕ ವಿಧಾನ ಸಭೆ

ಮಂಗಳವಾರ ದಿನಾಂಕ: 27ನೇ ಜೂನ್ 2006 ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11 ಗಂಟೆ 10 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರಾದ ಶ್ರೀ ಕೃಷ್ಣ ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು

1. ಸದಸ್ಯರ ಗೈರು ಹಾಜರಿ

ಅಧ್ಯಕ್ಷರು: ಪ್ರಸ್ತಾವ ಏನೆಂದರೆ : ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಯು.ಟಿ. ಫರೀದ್ ಅವರು ಅನಾರೋಗ್ಯದ ಕಾರಣ ದಿನಾಂಕ 19.06.2006 ರಿಂದ ಪ್ರಾರಂಭ ಆಗಿರುವ ಪ್ರಸಕ್ತ ಅಧಿವೇಶನದ ಮುಕ್ತಾಯದವರೆಗೂ ಗೈರು ಹಾಜರಾಗಲು ಅನುಮತಿಯನ್ನು ಕೋರಿ ಪತ್ರವನ್ನು ಬರೆದಿರುತ್ತಾರೆ. ಮಾನ್ಯ ಸದಸ್ಯರು ಗೈರು ಹಾಜರಾಗಲು ಸದನದ ಸಹಮತಿ ಇದೆ ಎಂದು ಭಾವಿಸಲಾಗಿದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮಾನ್ಯ ಸದಸ್ಯರಾದ ಶ್ರೀ ಯು.ಟಿ. ಫರೀದ್ ಅವರು ಸದನಕ್ಕೆ ಗೈರು ಹಾಜರಾಗಲು ಸದನವು ಒಪ್ಪಿಗೆ ನೀಡಿತು)

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(2) ಪ್ರಶ್ನೋತ್ತರಗಳು

(ಅ) ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

136 (729) ಶ್ರೀ ಪ್ರಭಾಕರ ಬಂಗೇರ ಕೆ.: ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ) ಬೆಳ್ತಗಂಡಿ ತಾಲ್ಲೂಕು ವ್ಯಾಪ್ತಿಯ ಲೊಕೋಪಯೋಗಿ ಇಲಾಖಾ ರಸ್ತೆಗಳು ದುಸ್ಥಿತಿಯಲ್ಲಿದ್ದು ಸಂಚಾರಕ್ಕೆ ಅನಾನುಕೂಲಕರವಾಗಿರುವುದನ್ನು ಸರ್ಕಾರ ಗಮನಿಸಿದೆಯೇ;

ಆ) ಹಾಗಿದ್ದಲ್ಲಿ, ಸಂಚಾರ ದಟ್ಟಣೆ ಇರುವ ಈ ರಸ್ತೆಗಳನ್ನು ದುರಸ್ಥಿಗೊಳಿಸುವ ಕಾಮಗಾರಿಗಳನ್ನು ತ್ವರಿತವಾಗಿ ಕೈಗೊಳ್ಳುವರೆ;

ಇ) ಪ್ರಮುಖ ರಸ್ತೆಗಳಾದ (1) ಗುರುವಾಯನಕೆರೆ–ಉಪ್ಪಿನಂಗಡಿ ರಸ್ತೆ (2) ಬೆಳ್ತಂಗಡಿ ಬಂಗಾಡಿ–ಕಿಲ್ಲೂರು ಕಾಜೂರು ರಸ್ತೆ (3) ಧರ್ಮಸ್ಥಳ–ತೋಟತ್ತಾಡಿ–ಕಕ್ಕಿಂಜೆ ರಸ್ತೆ (4) ನಿಡ್ಲೆ–ಕಾಯತಡ್ಕ–ಮದುವೆಟ್ಟು, ನೆರಿಯ ರಸ್ತೆ (5) ವೇಣೂರು–ಅಂಡಿಂಜೆ–ನಾರಕಿ ರಸ್ತೆ (6) ಮಂಡತ್ಯಾರು–ಬಳ್ಳಕುಂಜ ಕಲ್ಲೇರಿ ರಸ್ತೆಗಳನ್ನು ಮರುಡಾಂಬರೀಕರಣಗೊಳಿಸಿ ಸಂಚಾರ ಯೋಗ್ಯವನ್ನಾಗಿ ಮಾಡಲು ಸರ್ಕಾರ ಕ್ರಮ ಜರುಗಿಸುವರೇ?

**ಶ್ರೀ ಹೆಚ್ ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು):** ಅ) ಹೌದು ಈ ಸಾಲಿನಲ್ಲಿ ಸುರಿಯುತ್ತಿರುವ ಮಳೆಯಿಂದಾಗಿ ರಸ್ತೆಗಳು ತೀರಾ ಹಾನಿಗೀಡಾಗಿದ್ದು ಅತಿ ತುರ್ತಾಗಿ ವಾಹನಗಳ ಸುಗಮ ಸಂಚಾರಕ್ಕೆ ರಸ್ತೆಯ ಮೇಲ್ಪ್ರಯನ್ನು ಸುಸ್ಥಿತಿಯಲ್ಲಿಡಲು ಚರಂಡಿ ದುರಸ್ತಿ ಮತ್ತು ಡಬ್ಲ್ಯೂ.ಬಿ.ಎಂ.ಪ್ಯಾಚ್ ಕಾಮಗಾರಿ ಕೈಗೊಳ್ಳಲಾಗುತ್ತಿದೆ.

(ಆ)

| ಕ್ರ.ಸಂ | ಕಾಮಗಾರಿಯ ವಿವರ | ಪರಾ |
|---|---|---|
| 1. | ಗುರುವಾಯನಕೆರೆ–ಉಪ್ಪಿನಂಗಡಿ ರಸ್ತೆ ಕಿಮೀ 57.00 ರಿಂದ 76.40 ರವರೆಗೆ ಅಭಿವೃದ್ಧಿ (ಎಂ.ಡಿ.ಆರ್) | ಈ ರಸ್ತೆಯ ದುರಸ್ತಿ ಮತ್ತು ಅಭಿವೃದ್ಧಿ ಕಾಮಗಾರಿಯನ್ನು ಪ್ರಸಕ್ತ ಸಾಲಿನಲ್ಲಿ ಅನುದಾನದ ಲಭ್ಯತೆಯನ್ನಾಧರಿಸಿ ಕಾಮಗಾರಿಯನ್ನು ಕೈಗೊಳ್ಳಲಾಗುವುದು. |
| 2. | ಬೆಳ್ತಂಗಡಿ–ಕಿಲ್ಲೂರು–ಕಾಜೂರು ರಸ್ತೆ ಕಿ.ಮೀ. 0.00 ರಿಂದ 18–20ರವರೆಗೆ ಅಭಿವೃದ್ಧಿ (ಎಂ.ಡಿ.ಆರ್) | ಈ ರಸ್ತೆಗೆ ರೂ.70.00 ಲಕ್ಷ ಅನುದಾನವನ್ನು ಲೆಕ್ಕ ಶೀರ್ಷಿಕೆ 3054 ರಡಿ 2004–05 ನೇ ಸಾಲಿನಲ್ಲಿ ಮಂಜೂರಾಗಿದ್ದು ತಲಾ ರೂ.10.00 ಲಕ್ಷದಂತೆ 7 ಕಾಮಗಾರಿಗಳಿಗೆ ತಾಂತ್ರಿಕ ಮಂಜೂರಾತಿ ನೀಡಿ ಗುತ್ತಿಗೆದಾರರನ್ನು ನಿಗದಿಪಡಿಸಲಾಗಿರುತ್ತದೆ. ಪ್ರಸ್ತುತ ಸಾಲಿನ ಅನುದಾನದ ಲಭ್ಯತೆಯನ್ನಾಧರಿಸಿ ಡಾಂಬರೀಕರಣದ ಕಾಮಗಾರಿಯನ್ನು ಮಾರ್ಚ್ 2007 ರೊಳಗೆ ಪೂರ್ಣಗೊಳಿಸಲಾಗುವುದು. |
| 3. | ಧರ್ಮಸ್ಥಳ–ತೋಟತ್ತಾಡಿ–ಚಿಬಿದ್ರೆ ರಸ್ತೆ ಕಿಮಿ.0.00–10.80 ರವರೆಗೆ ಅಭಿವೃದ್ಧಿ (ಎಂ.ಡಿ.ಆರ್) | ಈ ರಸ್ತೆಯನ್ನು ನವೀಕರಣ ಮಾಡಬೇಕಾಗಿದ್ದು ಪ್ರಸ್ತುತ ಸಾಲಿನಲ್ಲಿ ಲಭ್ಯವಾಗುವ ಅನುದಾನದಲ್ಲಿ ಕಾಮಗಾರಿಯನ್ನು ಕೈಗೊಳ್ಳಲಾಗುವುದು. |
| 4. | ನಿಡ್ಲೆ–ರಾಯರತಡ್ಕ–ಪುದುವೆಟ್ಟು–ನೆರಿಯ ರಸ್ತೆ ಕಿಮೀ.0.00–23.40 ರವರೆಗೆ ಅಭಿವೃದ್ಧಿ (ಎಂ.ಡಿ.ಆರ್) | ಈ ರಸ್ತೆಯನ್ನು ನವೀಕರಣ ಮಾಡಬೇಕಾಗಿದ್ದು ಪ್ರಸ್ತುತ ಸಾಲಿನಲ್ಲಿ ಲಭ್ಯವಾಗುವ ಅನುದಾನದಲ್ಲಿ ಕಾಮಗಾರಿಯನ್ನು ಕೈಗೊಳ್ಳಲಾಗುವುದು. |
| 5. | ಪೇಣೂರು–ಅಂಡಂಚೆ–ನಾರಾಪಿ ರಸ್ತೆ ಕಿಮೀ.0.00 | ಈ ರಸ್ತೆಗೆ 2004–05ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 3054 ರಡಿ ರೂ.30.00 ಲಕ್ಷ ಅನುದಾನ |

| | | |
|---|---|---|
| | ರಿಂದ 15.80 ವರೆಗೆ ಅಭಿವೃದ್ಧಿ (ಎಂ.ಡಿ.ಆರ್) | ಮಂಜೂರಾಗಿದ್ದು ತಲಾ ರೂ.10.00 ಲಕ್ಷದಂತೆ 3 ಕಾಮಗಾರಿಗಳಿಗೆ ತಾಂತ್ರಿಕ ಮಂಜೂರಾತಿ ನೀಡಿ ಗುತ್ತಿಗೆದಾರರನ್ನು ನಿಗದಿಪಡಿಸಲಾಗಿರುತ್ತದೆ. ಪ್ರಸ್ತುತ ಸಾಲಿನಲ್ಲಿ ಲಭ್ಯವಾಗುವ ಅನುದಾನವನ್ನಾಧರಿಸಿ ಡಾಂಬರೀಕರಣದ ಕಾಮಗಾರಿಯನ್ನು ಮಾರ್ಚ್ 2007 ರೊಳಗೆ ಪೂರ್ಣಗೊಳಿಸಲಾಗುವುದು. ಉಳಿದ ಭಾಗ ಕಿಮೀ.9.00 ರಿಂದ 15.80 ರವರೆಗೆ ಲೆಕ್ಕ ಶೀರ್ಷಿಕೆ 5054 ರಡಿಯಲ್ಲಿ ರೂ. 25.00 ಲಕ್ಷ ಅನುದಾನ ಮಂಜೂರಾಗಿದ್ದು, ಗುತ್ತಿಗೆದಾರರನ್ನು ನಿಗದಿಪಡಿಸಿ ಮಾರ್ಚ್ 2007 ರೊಳಗೆ ಪೂರ್ಣಗೊಳಿಸಲಾಗುವುದು. |
| 6. | ಮಂಡತ್ಯಾರು–ಬಳ್ಳಕುಂಜ–ಕಲ್ಲೇರಿ ರಸ್ತೆ ಕಿಮೀ.0.00 ರಿಂದ 10.80 ರವರೆಗೆ ಅಭಿವೃದ್ಧಿ (ಎಂ.ಡಿ.ಆರ್) | ಪ್ರಸಕ್ತ ಸಾಲಿನಲ್ಲಿ ಅನುದಾನದ ಲಭ್ಯತೆಯನ್ನಾಧರಿಸಿ ಕಾಮಗಾರಿಯನ್ನು ಕೈಗೊಳ್ಳಲಾಗುವುದು. |

**ಶ್ರೀ ಮಲ್ಲಿಕಾರ್ಜುನ ಸಿದ್ದರಾಮಪ್ಪ ಕೂಬರವರು:** ಮಾನ್ಯ ಸದಸ್ಯರು ಗೈರು ಹಾಜರಾಗಿದ್ದಾರೆ.

**ಶ್ರೀ ಕೆ. ಪ್ರಭಾಕರ ಬಂಗೇರ:** ಸನ್ಮಾನ್ಯ ಸಭಾಧ್ಯಕ್ಷರೇ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಈಗಾಗಲೇ ಹೇಳಿದ ಹಾಗೆ ಬೆಳ್ತಂಗಡಿ ತಾಲ್ಲೂಕಿನ ಗುರುವಾಯನಕೆರೆ ಉಪ್ಪಿನಂಗಡಿ ರಸ್ತೆಯ ಅಗಲ ಕಿರಿದಾಗಿದೆ. ಆ ರಸ್ತೆಯಲ್ಲಿ ವಾಹನ ಸಂಚಾರಕ್ಕೆ ಹೋಗಲು ಸಾಧ್ಯವೇ ಇಲ್ಲದ ದುಸ್ಥಿತಿ ನಿರ್ಮಾಣ ಆಗಿದೆ. ನಾನು ಕೇಳಿದಾಗ ಅದಕ್ಕೆ ಪ್ಯಾಚಪ್ ವರ್ಕ್ ಮಾತ್ರ ಮಾಡಿದ್ದಾರೆ. ಚರಂಡಿ ಕೆಲಸಕಾರ್ಯಗಳು ಆಗಿವೆ. ಆದರೆ ಡಾಂಬರೀಕರಣ, ಅಗಲೀಕರಣ ಆಗದೇ ಅದು ಜನಸಂಚಾರಕ್ಕೆ ವಾಹನ ಸಂಚಾರಕ್ಕೆ ಹೋಗಲು ಸಾಧ್ಯವಾಗುವುದಿಲ್ಲ. ನಾನು ಕೇಳಿದ ಪ್ರಶ್ನೆಗೂ ಅವರು ಉತ್ತರ ಹೇಳಿದ್ದಾರೆ. ಬ್ಬರುವ ವರ್ಷದಲ್ಲಿ ಈ ಕಾರ್ಯವನ್ನು ಕೈಗೆತ್ತಿಕೊಳ್ಳುತ್ತೇನೆ, ಹಣದ ಲಭ್ಯತೆ ಮೇರೆಗೆ ಎಂದು ಹೇಳುತ್ತಿದ್ದಾರೆ. ನಾನು ಮುಖ್ಯವಾಗಿ ತಮ್ಮ ಮೂಲಕ ಅವರನ್ನು ವಿನಂತಿ ಮಾಡುವುದು ಇಷ್ಟೆ. ಆ ಒಂದು ರಸ್ತೆಯನ್ನು ಈ ವರ್ಷದ ಡಿಸೆಂಬರ್ ಒಳಗಾಗಿ ಮಾಡಿಕೊಡುತ್ತೇನೆಂದು ಭರವಸೆಯನ್ನು ಕೊಟ್ಟಾಗ ಮಾತ್ರ ನನಗೆ ನನ್ನ ಕ್ಷೇತ್ರದಲ್ಲಿ ಓಡಾಡುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದೇ ಇದ್ದರೆ ಸಾಧ್ಯವಾಗುವುದಿಲ್ಲ. ಹಾಗಾಗಿ ಆ ಒಂದು ರಸ್ತೆಯನ್ನು ಮೊದಲಾಗಿ ಮಾಡಿ ಕೊಡಬೇಕೆಂಬ ಮನವಿಯನ್ನು ಮಾಡುತ್ತಿದ್ದೇನೆ. ಅದರೊಟ್ಟಿಗೆ ಈಗಾಗಲೇ ಅವರು ಹಿಂದೆ ಲೋಕೋಪಯೋಗಿ ಸಚಿವರಾಗಿ ನಮ್ಮ ಕ್ಷೇತ್ರಕ್ಕೆ ಬಂದಿದ್ದರು. ಧರ್ಮಸ್ಥಳದಲ್ಲಿ

ಮತ್ತು ಚಾರ್ಮಡಿ ರಸ್ತೆಗೂ ಕೂಡ ಅವರು ಶಿಲಾನ್ಯಾಸ ಮಾಡಿ ಹೋಗಿದ್ದರು. 30:54 ಅಡಿಯಲ್ಲಿ ಕೆಲಸವನ್ನು ಮಾಡಲಿಕ್ಕೆ ಅನುಮತಿ ಕೊಟ್ಟರೂ ಕೂಡ ಗುತ್ತಿಗೆದಾರರು ಅದನ್ನು ಮಾಡದೇ ಇರುವುದನ್ನು ಕಂಡಿದ್ದೇನೆ. ಈ ವರ್ಷ ನಮ್ಮ ಒತ್ತಾಯಕ್ಕಾಗಿ ಅವರು ಡಾಂಬರೀಕರಣವನ್ನು ಮಾಡಿದ್ದಾರೆ. ಆದರೆ ಗುತ್ತಿಗೆದಾರರಿಗೆ ಹಣ ಪಾವತಿ ಆಗಿಲ್ಲ 3054ರ ಅಡಿಯಲ್ಲಿ ನಾವು ಪದೇ ಪದೇ ಸರ್ಕಾರವನ್ನು, ಮಂತ್ರಿಗಳನ್ನು ಹಾಗೂ ಸಂಬಂಧಪಟ್ಟವರನ್ನು ವಿನಂತಿ ಮಾಡಿದರೂ ಕೂಡ ಆಗದೇ ಇರುವುದರಿಂದ ಅವರು ಇನ್ನೊಂದು ಕಾಮಗಾರಿಯನ್ನು ಮಾಡಬೇಕೆಂದಿದ್ದರೂ ಕೂಡ ಹಿಂದಿನ ವರ್ಷದ ಕಾಮಗಾರಿಯ ಹಣವನ್ನು ಪಾವತಿ ಮಾಡದೇ ಇನ್ನೂ ಮಾಡಿ ಎಂದು ಹೇಳಿದರೆ ನಾವು ಕೂಡ ಆ ಕ್ಷೇತ್ರದಲ್ಲಿ ಓಡಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಹಾಗಾಗಿ ಆ ಒಂದು ರಸ್ತೆಯಲ್ಲಿ ಡಾಂಬರೀಕರಣ ಆಗಿರುವುದಕ್ಕೆ ಕೂಡ ಹಣದ ಒಂದು ಮಂಜೂರಾತಿಯನ್ನು ಕೊಟ್ಟು ಆ ಮೂಲಕವಾಗಿ ಕ್ಷೇತ್ರದಲ್ಲಿ ಓಡಾಡುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ಕೇಳುತ್ತೇನೆ. ಇನ್ನೊಂದು ವಿಚಾರ. ನಮ್ಮಲ್ಲಿ ಇನ್ನೂ ಕೂಡ ಜಿಲ್ಲಾ ಮುಖ್ಯ ರಸ್ತೆಗಳು ಇವೆ. ಅದೂ ಕೂಡ ಡಾಂಬರೀಕರಣ ಆಗದೇ ಇರುವಂತಹದ್ದು ಇದೆ. ಅದರಲ್ಲಿ ಕೂಡ 3054ರ ಅಡಿಯಲ್ಲಿ ಗುತ್ತಿಗೆಯನ್ನು ಟೆಂಡರ್ ಕರೆದಿದ್ದಾರೆ. ಆದರೆ ಅವರು ಕಳೆದ ವರ್ಷ ಕೂಡ ಅವರು ಕೆಲಸವನ್ನು ಮಾಡಲಿಲ್ಲ. ಈ ಸಲ ಮಾರ್ಚ್ 27ರ ಒಳಗಾಗಿ ಆ ಕಾಮಗಾರಿಯನ್ನು ಮುಗಿಸುತ್ತೇವೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಉತ್ತರ ಕೊಟ್ಟರೆ ಮಾತ್ರ ಸಾಧ್ಯವಾಗುವುದಿಲ್ಲ. ಹಣ ಬಿಡುಗಡೆ ಮಾಡಿ, ಅವರಿಗೆ ಆದಷ್ಟು ಶೀಘ್ರವಾಗಿ ಅಲ್ಲಿ ಆ ಒಂದು ಕೆಲಸ ಕಾರ್ಯವನ್ನು ಮಾಡಲಿಕ್ಕೆ ತಮ್ಮ ಮುಖಾಂತರ ಮಾನ್ಯ ಸಚಿವರನ್ನು ವಿನಂತಿ ಮಾಡುತ್ತೇನೆ.

**ಶ್ರೀ ಹೆಚ್.ಡಿ.ರೇವಣ್ಣ (ಲೋಕೋಪಯೋಗಿ ಸಚಿವರು)** ಮಾನ್ಯ ಅಧ್ಯಕ್ಷರೆ, ಗುರುವಾಯನಕೆರೆ–ಉಪ್ಪಿನಂಗಡಿ ರಸ್ತೆ ಸುಮಾರು 19 ಕಿಲೋ ಮೀಟರ್ ರಸ್ತೆ ಇದೆ. ನಾವು ಈಗಾಗಲೇ ಹಣಕಾಸಿನ ಲಭ್ಯತೆಯ ಮೇಲೆ ಈ ಕೆಲಸವನ್ನು ಪ್ರಾರಂಭ ಮಾಡಬೇಕೆಂದು ಇರಾದೆ ಇದೆ. ಈ ವರ್ಷದ ಹಣದ ಲಭ್ಯತೆ ಮೇರೆಗೆ ಈ ಕೆಲಸವನ್ನು ಮಾಡಲಾಗುವುದು. ಮತ್ತೆ ಅದಲ್ಲದೇ ಈಗೇನು 3054ನಲ್ಲಿ ಕೆಲವು ಬಿಲ್ ಅವರ ತಾಲ್ಲೂಕಿನಲ್ಲಿ ಖಾಲಿ ಇದೆ. ಅದನ್ನು ಹಣ ಬಂದಂತಹ ಸಂದರ್ಭದಲ್ಲಿ ಕೊಡುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡುತ್ತೇನೆ.

**ಶ್ರೀ ಕೆ. ಪ್ರಭಾಕರ ಬಂಗೇರ:** ಹಣದ ಲಭ್ಯತೆ ಮೇರೆಗೆ ಮಾಡುತ್ತೇವೆಂದು ಹೇಳಿದರೆ ಅದು ಕೆಲಸ ಆಗುವುದೂ ಕೂಡ ಖಂಡಿತ ಆಗುವುದಿಲ್ಲ ಎಂದು ನನ್ನ ಮನಸ್ಸಿಗೆ ಅನಿಸಿಕೆ ಆಗುತ್ತಿದೆ. ಹಾಗಾಗಿ ನಾನು ಸಚಿವರಲ್ಲಿ ಭರವಸೆಯ ಮಾತುಗಳನ್ನು ಹೇಳಬೇಕು ಎಂದು ಕೇಳಲಿಕ್ಕೆ ಇಷ್ಟಪಡುತ್ತಿದ್ದೇನೆ. ಆ ಒಂದು ರಸ್ತೆಯನ್ನು ಯಾವುದೇ 12ನೇ ಹಣಕಾಸು ಕಮೀಷನ್‌ನಲ್ಲಿ ಇರಬಹುದು, ಅಥವಾ ಸಿಆರ್‌ಎಫ್‌ನಲ್ಲಿ ಇರಬಹುದು ಅಥವಾ ತಮ್ಮದೇ ಆದಂತಹ ಅನುದಾನದಲ್ಲಿ 3054ನ್ನು ಬಿಟ್ಟು ಬೇರೆ ಅನುದಾನದಲ್ಲಿ ಡಿಸೆಂಬರ್ ಒಳಗಾಗಿ ಮಾಡಿಕೊಡುತ್ತೇವೆಂದು ಭರವಸೆಯನ್ನು ಕೊಟ್ಟಾಗ ನಾನು ನಿಮ್ಮಲ್ಲಿಂದ ಕ್ಷೇತ್ರದಲ್ಲಿ ಓಡಾಡುವುದಕ್ಕೆ ಸಾಧ್ಯವಾಗುತ್ತದೆ. ಮತ್ತು ಕಳೆದ ವರ್ಷ ಆಗಿರುವಂತಹ ಕಾಮಗಾರಿಗಳಿಗೂ ಕೂಡ ಹಣದ ಲಭ್ಯತೆಯ ಆಧಾರದ ಮೇಲೆ ಬಿಡುಗಡೆ ಮಾಡುತ್ತೇವೆಂದರೆ ಸಾಧ್ಯವಾಗುವುದಿಲ್ಲ. ಸರ್ಕಾರ

ಈ ಬಗ್ಗೆ ಚಿಂತನೆಯನ್ನು ಮಾಡಬೇಕಾಗಿದೆ. ಈಗಾಗಲೇ ಎಸ್. ಆರ್. ರೇಟ್‌ಗಳು ಜಾಸ್ತಿ ಆಗಿರುವ ಹಿನ್ನೆಲೆಯೊಳಗೆ ಕಳೆದ ವರ್ಷ ಮಾಡಿರುವಂತಹ ಕಾಮಗಾರಿಗಳಿಗೆ ಗುತ್ತಿಗೆದಾರರು ನಷ್ಟಕ್ಕೆ ತುಂಬಾ ಗುರಿ ಆಗುತ್ತಾರೆ ಎಂಬ ಮಾತನ್ನು ಹೇಳುತ್ತಿದ್ದಾರೆ. ಹಾಗಾಗಿ ಇನ್ನು ಮುಂದೆ ಆಗುವಂತಹ ಕಾಮಗಾರಿಗಳಿಗೆ ಎಸ್.ಆರ್.ರೇಟನ್ನು ಕೊಡುವಾಗ ರಿವಿಜನ್ ರೇಟ್‌ನಲ್ಲಿ ಅವರಿಗೆ ಕೊಟ್ಟಾಗ ಮಾತ್ರ ಕೆಲಸವನ್ನು ಮಾಡುತ್ತೇವೆಂದು ಅವರು ಹೇಳುತ್ತಾರೆ. ಅದನ್ನು ಕೂಡ ರಿವಿಜನ್ ಮಾಡಿ ಕೊಡುವಂತೆ ತಮ್ಮ ಮೂಲಕ ವಿನಂತಿ ಮಾಡುತ್ತಿದ್ದೇನೆ.

**ಶ್ರೀ ಹೆಚ್.ಡಿ. ರೇವಣ್ಣ:** ಮಾನ್ಯ ಸಭಾಧ್ಯಕ್ಷರೆ, 12ನೇ, ಫೈನಾನ್ಸ್‌ನಲ್ಲೋ ಅಥವಾ ಸಿಆರ್‌ಎಫ್‌ನಲ್ಲೋ ಯಾವುದರಲ್ಲಾದರೂ ತೆಗೆದುಕೊಳ್ಳುವುದಕ್ಕೆ ಪ್ರಾಮಾಣಿಕ ಪ್ರಯತ್ನ ಪಡುತ್ತೇನೆ.

**ವಿಷಯ:–ಬೀದರ್ ಜಿಲ್ಲೆಯಲ್ಲಿ ಎಂ.ಡಿ.ಆರ್. ಗಳನ್ನು ದುರಸ್ತಿ ಮಾಡುವ ಬಗ್ಗೆ.**

**137 (739) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್):** ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೀದರ್ ಜಿಲ್ಲೆಯಲ್ಲಿ ಬರುವ ಪ್ರಮುಖ ರಾಜ್ಯ ಹೆದ್ದಾರಿಗಳ ಸಂಖ್ಯೆ ಎಷ್ಟು (ಎಂ.ಡಿ.ಆರ್) ಇವು ಎಷ್ಟು ಕಿ.ಮೀ ಉದ್ದ ಇವೆ ಹಾಗೂ ಈ ಪೈಕಿ ಎಷ್ಟು ರಸ್ತೆಗಳು ಅಂತರ ರಾಜ್ಯಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳಾಗಿವೆ ಜಿಲ್ಲೆಯ ಬಹುತೇಕ ಹೆದ್ದಾರಿಗಳು ಸಮರ್ಪಕವಾದ ನಿರ್ವಹಣೆ ಮತ್ತು ದುರಸ್ತಿ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಪ್ರಸಕ್ತ ಸಾಲಿನಲ್ಲಿ ಬೀದರ್ ಜಿಲ್ಲೆಯ ಯಾವ ಎಂ.ಡಿ.ಆರ್ ಗಳನ್ನು ದುರಸ್ಥಿ ಮಾಡಲಾಗುವುದು ಇದಕ್ಕಾಗಿ ಎಷ್ಟು ಹಣವನ್ನು ವೆಚ್ಚ ಮಾಡಲಾಗುವುದು ಈಗ ಪ್ರಗತಿಯಲ್ಲಿರುವ ಅಂತರ ರಾಜ್ಯಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಗಳ ವಿವರಗಳೇನು?

**ಶ್ರೀ ಹೆಚ್.ಡಿ.ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)**

ಅ) ಬೀದರ್ ಜಿಲ್ಲೆಯಲ್ಲಿ ಒಟ್ಟು 7 ಪ್ರಮುಖ ರಾಜ್ಯ ಹೆದ್ದಾರಿಗಳಿದ್ದು ಇವುಗಳ ಒಟ್ಟು ಉದ್ದ 476.99 ಕಿಮೀ ಹಾಗೂ ಒಟ್ಟು 58 ಎಂಡಿಆರ್ ಗಳಿದ್ದು ಇವುಗಳ ಒಟ್ಟು ಉದ್ದ 867.34 ಕಿಮೀ ಇರುತ್ತದೆ. ಈ ಪೈಕಿ 3 ರಾಜ್ಯ ಹೆದ್ದಾರಿಗಳನ್ನು 17 ಎಂಡಿಆರ್‌ಗಳು ಅಂತರ್ ರಾಜ್ಯಗಳಿಗೆ ಸಂಪರ್ಕ ಕಲ್ಪಿಸುತ್ತವೆ. ರಾಜ್ಯ ಹೆದ್ದಾರಿಗಳನ್ನು 2005–08ನೇ ಸಾಲಿಗೆ 3 ವರ್ಷ ವಾರ್ಷಿಕ ನಿರ್ವಹಣೆಯಡಿಯಲ್ಲಿ ಕೆ.ಆರ್.ಡಿ.ಸಿ.ಎಲ್ ಮತಿಯಿಂದ ಅಭಿವೃದ್ಧಿ ಕಾಮಗಾರಿ ಕೈಗೆತ್ತಿಕೊಳ್ಳಲಾಗುತ್ತಿದೆ. ಜಿಲ್ಲಾ ಮುಖ್ಯ ರಸ್ತೆಗಳನ್ನು ಪ್ರಸ್ತುತ ಸಾಲಿನಲ್ಲಿ ಲಭ್ಯವಿರುವ ಅನುದಾನದಲ್ಲಿ ನಿರ್ವಹಣೆ ಮತ್ತು ದುರಸ್ತಿ ಮಾಡಲಾಗುತ್ತದೆ.

ಆ) ಪ್ರಸ್ತುತ ಸಾಲಿನ ಆಯವ್ಯಯದಲ್ಲಿ ಅನುದಾನ ಲಭ್ಯತೆ ಆಧರಿಸಿ ಜಿಲ್ಲಾ ಮುಖ್ಯ ರಸ್ತೆಗಳ ಅಂತರರಾಜ್ಯ ಸಂಪರ್ಕ ಕಲ್ಪಿಸುವ ರಸ್ತೆಗಳ ದುರಸ್ತಿ ಹಾಗೂ ಸುಧಾರಣೆ ಕೈಗೊಳ್ಳಲಾಗುವುದು. ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.